ಅನುಬಂಧ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೋಕಿನಲ್ಲಿ ಪ್ರಗತಿಯಲ್ಲಿರುವ ಸೇತುವೆ ಕಾಮಗಾರಿಗಳ ವಿವರಗಳನ್ನು ತೋರಿಸುವ ತಃಖ್ತೆ

ಕ್ರ.ಸಂ.	ಕಾಮಗಾರಿಯ ವಿವರಗಳು	ಷರಾ
	ಜಿಲ್ಲಾಪರಿಷತ್ : 5054—800—73 ಹೊಸ ಸೇತುವೆ ಮತ್ತು ಅಡಿಗಲ್ಲುಗಳ ನಿರ್ಮಾಣ ಮತ್ತು ಈಗಿರುವುಗಳ ಸುಧಾರಣೆ	
1)	4/4 ಆಂಬ್ಲಿಗೋಳ ರಸ್ತೆಯಿಂದ ಮಲ್ಲೀನಹಳ್ಳಿ ರಸ್ತೆಯಲ್ಲಿ 1ನೇ ಕಿ. ಮೀಟರ್‌ನಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಕೆಲಸವು ಪ್ರಗತಿಯಲ್ಲಿದೆ.
2)	ಶಿಕಾರಿಪುರ ತಾಲೋಕು ನರಸಾಪುರ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಕೆಲಸವು ಪ್ರಗತಿಯಲ್ಲಿದೆ.
3)	ಸುರಗಿಹಳ್ಳಿ ಬಳಿ ಕುಮದ್ವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ಆಗಿರುವುದಿಲ್ಲ.
4)	ಹಾರೋಕೊಪ್ಪ—ಸಾಲೂರು ರಸ್ತೆ 7ನೇ ಕಿ. ಮೀ. ನಲ್ಲಿ ಕುಮದ್ವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಟ್ರಯಲ್ ಬೋರ್ ತೆಗೆಸಲು ಕ್ರಮ ಕೈಗೊಳ್ಳಲಾಗಿದೆ.
5)	ಕಳಸೇನಹಳ್ಳಿ ಶಿವಯೋಗಿ ಮಂದಿರದ ಹತ್ತಿರ ಕುಮದ್ವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.	ಟ್ರಯಲ್ ಬೋರ್ ತೆಗೆಸಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ :– ಹುಕ್ಕೇರಿ ತಾಲ್ಲೂಕಿನ ಮೋಡ್‌ಗೆ ಬ್ಯಾರೇಜ್‌ನ ಅಂದಾಜು ಪತ್ರಿಕೆಗೆ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 455 (1091)

ಶ್ರೀ ಸುಭಾಷ ಜೋಶಿ (ನಿಪ್ಪಾಣಿ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಕ್ಕೇರಿ ತಾಲ್ಲೂಕಿನ ಮೋಡ್‌ಗೆ ಬ್ಯಾರೇಜ್‌ನ ಅಂದಾಜು ಪತ್ರಿಕೆಗೆ ಮಂಜೂರಾತಿ ದೊರೆತಿದೆಯೆ ?

ಆ) ಹಾಗಿದ್ದಲ್ಲಿ ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು.?

ಇ) ಇಲ್ಲದಿದ್ದಲ್ಲಿ ಈ ಕೆಲಸಕ್ಕೆ ಮಂಜೂರಾತಿ ಯಾವಾಗ ದೊರೆಯುವುದು.?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಮೋಡಗೆ ಗ್ರಾಮದ ಪತ್ತಿರ ಬ್ಯಾರೇಜ್ ನಿರ್ಮಿಸುವ ಯಾವ ಪ್ರಸ್ತಾಪವೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ :– ಮಂಗಳೂರಿನಲ್ಲಿ ಜಿಲ್ಲಾ ಕಛೇರಿ ಕಟ್ಟಡ ಸಂಕೀರ್ಣದ ನಿರ್ಮಾಣದ ಕಾರ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 457 (1185)

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಮಂಗಳೂರು) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರಿನಲ್ಲಿ ಜಿಲ್ಲಾ ಕಛೇರಿ ಕಟ್ಟಡ ಸಂಕೀರ್ಣದ ನಿರ್ಮಾಣದ ಕಾರ್ಯ ಯಾವಾಗ ಪ್ರಾರಂಭವಾಯಿತು ?

ಆ) ಈ ಕಟ್ಟಡದ ಅಂದಾಜು ವೆಚ್ಚ ಎಷ್ಟು ?

ಇ) ಈವರೆವಿಗೆ ಆದ ವೆಚ್ಚವೆಷ್ಟು ?

ಈ) ಸದರೀ ಕಟ್ಟಡವು ಯಾವಾಗ ಪೂರ್ಣಗೊಳ್ಳುತ್ತದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :-

ಅ) ಮೊದಲನೇ ಹಂತದ ನಿರ್ಮಾಣ ಕಾರ್ಯ ಪ್ರಾರಂಭಿಸಲಾದ ದಿನಾಂಕ 29-8-1985.

ಆ) ಸಂಪೂರ್ಣ ಸಂಕೀರ್ಣಕ್ಕೆ ಮಂಜೂರಾದ ಅಂದಾಜು ಮೊತ್ತ 222.00 ಲಕ್ಷ ರೂಪಾಯಿಗಳು.

ಇ) ನವೆಂಬರ್ 1990ರ ವೇಳೆಗೆ ಒಟ್ಟು 64,00,980-00 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಈ) ಮೊದಲನೇ ಹಂತದ ಕಟ್ಟಡವನ್ನು 1992 ರ ಏಪ್ರಿಲ್ ತಿಂಗಳ ವೇಳೆಗೆ ಮುಗಿಸಲು ಯೋಜಿಸಲಾಗಿದೆ.

ವಿಷಯ :- ತುಮಕೂರು ಜಿಲ್ಲೆಯ ಅಂತರಸನಹಳ್ಳಿಗೆ ವಿದ್ಯುತ್ ಕೇಂದ್ರವನ್ನು ಪ್ರಾರಂಭ ಮಾಡದೇ ಇರುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 458 (1181)

ಶ್ರೀ ಎಸ್. ಷಫಿ ಅಹಮದ್ (ತುಮಕೂರು) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯ ಅಂತರಸನಹಳ್ಳಿಗೆ ಎಂ. ಇ. ಎಸ್. ಸ್ಟೇಷನ್ ಅನ್ನು (ಕೆ. ಇ. ಬಿ.) ಸರ್ಕಾರವು ಯಾವಾಗ ಮಂಜೂರು ಮಾಡಿದೆ ?

ಆ) ಈ ವಿದ್ಯುತ್ ಕೇಂದ್ರವನ್ನು ಪ್ರಾರಂಭ ಮಾಡದೇ ಇರಲು ಕಾರಣಗಳು ?

ಇ) ಇದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :-

ಅ) ಒಂದು 8 ಎಂ. ವಿ. ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಉಳ್ಳ 66-11 ಕೆ. ವಿ. ಉಪ ವಿದ್ಯುತ್ ಕೇಂದ್ರವನ್ನು ತುಮಕೂರು ಜಿಲ್ಲೆಯ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಸೆಪ್ಟೆಂಬರ್ 88ರಲ್ಲಿ ಮಂಜೂರು ಮಾಡಿದೆ.

ಆ) ಈ ಮಧ್ಯೆ, ಇದೇ ಸ್ಥಳದಲ್ಲಿ ವಿಶ್ವ ಬ್ಯಾಂಕಿನ ಆರ್ಥಿಕ ನೆರವಿನೊಡನೆ 220-66 ಕೆ. ವಿ. ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಈಗ ಈ ಎರಡೂ ಯೋಜನೆಗಳನ್ನು ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿರ್ವಹಿಸಲಾಗುವುದು.

ಇ) 66-11 ಕೆ. ವಿ. ಉಪ ವಿದ್ಯುತ್ ಕೇಂದ್ರದ ಕೆಲಸ ಈಗ ಪ್ರಾರಂಭಿಸಲಾಗಿದೆ.

ವಿಷಯ :- ಸುಲ್ತಾನ್ ಬತ್ತೇರಿ ಮತ್ತು ತಣ್ಣೀರ್ ಭಾವಿಯನ್ನು ಸಂಪರ್ಕಿಸುವ ಸೇತುವೆ ಪ್ರಸ್ತಾವನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 459 (1184)

ಶ್ರೀ ಫ್ಲೇಸಿಯಸ್ ಎಂ. ಡಿಸೋಜ (ಮಂಗಳೂರು) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಸಮುದ್ರ ತೀರ ಪ್ರದೇಶದ ಸುಲ್ತಾನ್ ಬತ್ತೇರಿ ಮತ್ತು ತಣ್ಣೀರ್ ಭಾವಿಯನ್ನು ಸಂಪರ್ಕಿಸುವ ಸೇತುವೆ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರವು ಸದರಿ ಸೇತುವೆಯನ್ನು ಕಟ್ಟುವ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಬಂದಿದೆ.

ಆ) ಪ್ರಸ್ತಾವಿತ ಸೇತುವೆ ನಿರ್ಮಾಣಕ್ಕೂ ಹಾಗೂ ಕೂಡುರಸ್ತೆಗಳ ನಿರ್ಮಾಣ ಮತ್ತು ಭೂ-ಸ್ವಾಧೀನಕ್ಕೆ ಸುಮಾರು 250 ಲಕ್ಷ ರೂ.ಗಳ ಅಂದಾಜು ಬರುತ್ತದೆ. ಈ ರಸ್ತೆಯ ಭಾಗಗಳು ಮಂಗಳೂರು ನಗರಪಾಲಿಕೆ ಹಾಗೂ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಇಷ್ಟು ಹೆಚ್ಚಿನ ಮೊತ್ತದ ಕಾಮಗಾರಿಗಳನ್ನು ತೆಗೆದುಕೊಳ್ಳುವ ಪ್ರಸ್ತಾವನೆಯು ಮಂಗಳೂರು ನಗರಪಾಲಿಕೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನವರಲ್ಲಿ ಇರುವುದಿಲ್ಲ. ರಸ್ತೆಯ ಪ್ರಾಮುಖ್ಯತೆಯನ್ನು ಪರೀಕ್ಷಿಸಿ ಕೇಂದ್ರ ಸರ್ಕಾರದ ರಸ್ತೆ ಫಂಡ್ ಯೋಜನೆಯಡಿ ಕಾಮಗಾರಿಯನ್ನು ಸೇರಿಸುವ ಬಗ್ಗೆ ಪರಿಶೀಲಿಸಲಾಗುವುದು.